









ಅಖಂಡ ಪ್ರಕಟಣೆಯ
೨೫ ನೇ ವರ್ಷದಲ್ಲಿ

# ಸ್ಫೂರ್ತಿ

...ಕ್ಟೋಬರ್, ೧೯೭೨. ಬೆಲೆ ರೂ. ೨-೫೦.





## ಜನತೆ ಜಾಗೃತರಾಗದಿದ್ದರೆ ದುರಂತ ಖಂಡಿತ

ಹಿಂದೆ ದೇವರು ಮತ್ತು ಧರ್ಮದ ಹೆಸರಿನಲ್ಲಿ ಅನ್ಯಾಯಗಳು ನಡೆಯುತ್ತಿದ್ದರೆ, ಇಂದು ದೇಶದ ಹೆಸರಿನಲ್ಲಿ; ಜನತೆಯ ಸೇವೆ ಮಾಡುತ್ತೇವೆ, ಜನರ ಉದ್ಧಾರಕ್ಕೆ ಶ್ರಮಿಸುತ್ತೇವೆ ಎಂಬ ಮುಖವಾಡದಲ್ಲಿ, ಹಿಂದಿನಕಿಂತಲೂ ಹೆಚ್ಚು ಅನ್ಯಾಯಗಳು ನಡೆಯುತ್ತಿರುವುದು ಗೋಚರಿಸುತ್ತಿದೆ. ಜನತೆಗಾಗಿ, ನಾಡಿಗಾಗಿ ಹಾಗು ದೇಶದ ಹಿತಾಭಿವೃದ್ಧಿಗಾಗಿ ಶ್ರಮಿಸುವ ಆಶ್ವಾಸನೆಯಿತ್ತು ಜನತೆಯಿಂದ ಆಯ್ಕೆಗೊಳ್ಳುವ ಪ್ರತಿನಿಧಿಗಳು ಮೊದಲು ತಮ್ಮ ಉದ್ಧಾರ ಮಾಡಿಕೊಳ್ಳುವ ಕೆಲಸದಲ್ಲಿ ನಿರತರಾಗುತ್ತಿದ್ದಾರೆ. ಭ್ರಷ್ಟಾಚಾರದ್ದೇ ಮೇಲುಗೈಯಾಗುತ್ತಿದೆ. ಇಂಥ ಭ್ರಷ್ಟರು ಹಾಗು ಭ್ರಷ್ಟ ಸರ್ಕಾರಗಳು ಬೇರೆ ದೇಶಗಳಲ್ಲಾಗಿದ್ದರೆ ಜನರು ಇಂಥವರನ್ನು ಜೀವಂತ ಬಿಡುತ್ತಿರಲಿಲ್ಲ-ಎಂದು ನಾಡಿನ ಖ್ಯಾತ ಸಾಹಿತಿ, ನಿವೃತ್ತ ಐ. ಎ. ಎಸ್. ಅಧಿಕಾರಿ ಹಾಗು ಕರ್ನಾಟಕ ವಿಕಾಸ ವೇದಿಕೆಯ ಅಧ್ಯಕ್ಷ ಡಾ|| ಸಿದ್ಧಯ್ಯ ಪುರಾಣಿಕ ಅವರು ಇತ್ತೀಚೆಗೆ ಧಾರವಾಡ ಜಿಲ್ಲೆಯ ನರೇಗಲ್ ಪಟ್ಟಣದಲ್ಲಿ ಏರ್ಪಡಿಸಿದ್ದ ಒಂದು ಸಮಾರಂಭದಲ್ಲಿ ಮಾತನಾಡುತ್ತ ನುಡಿದಿದ್ದಾರೆ.

"ಕಾವ್ಯಾನಂದ" ಕಾವ್ಯನಾಮದಿಂದ ಕನ್ನಡ ಸಾರಸ್ವತ ಲೋಕದಲ್ಲಿ ತಮ್ಮದಾದ ಮಹೋನ್ನತ ಹೆಸರು ಸಂಪಾದಿಸಿದ ಡಾ|| ಸಿದ್ಧಯ್ಯನವರ ೭೫ ನೇ ಜನ್ಮ ದಿನಾಚರಣೆಯ ಗೌರವಾರ್ಥ ಶ್ರೀ ಅನ್ನದಾನೇಶ್ವರ ಮಹಾ ವಿದ್ಯಾಲಯದಲ್ಲಿ ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ, ಅಭಿನವ ಅನ್ನದಾನೇಶ್ವರ ಶ್ರೀಗಳಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ತಮ್ಮ ಭಾಷಣದಲ್ಲಿ ಈ ಕೆಳಗಿನಂತೆ ಹೇಳಿದ್ದಾರೆ-

ಇಂದು ದೇಶ ಅಪಾಯದ ಅಂಚಿಗೆ ನಿಂತಿದೆ. ಜನತೆ ಜಾಗೃತರಾಗದಿದ್ದರೆ ಖಂಡಿತಾ ದುರಂತವನ್ನು ಕಾಣಬೇಕಾಗಿ ಬರುತ್ತದೆ.

ಬಹ್ವಂಶ ಜನ ರಾಜಕಾರಣಿಗಳು ಭಾವೈಕ್ಯ ಕುರಿತು ಧಾರಾಳವಾಗಿ ಮಾತನಾಡುತ್ತಾರೆ. ಆದರೆ ಅವರು ಮಾಡುವುದೊ ಬರೀ ದೇಶ ಒಡೆಯುವ ಕೆಲಸವೇ. ಭಾವೈಕ್ಯದ ಹೆಸರಿನಲ್ಲಿ ತಾವು ಮಾಡಿದ ಅನ್ಯಾಯ ಮುಚ್ಚಿಕೊಳ್ಳುವ ಕೆಲಸ ದೇಶದಲ್ಲಿಂದು ನಡೆಯುತ್ತಿದೆ. ಅನ್ಯಾಯದ ವಿರುದ್ಧ ಆಡುವ ಮಾತುಗಳೆಲ್ಲ ಕೇವಲ ಕಂಠ ಘೋಷಣೆಗಳಾಗುತ್ತಿವೆ.

ಭ್ರಷ್ಟಾಚಾರದ ವಿರುದ್ಧ ಜನತೆ ಇಂದು ಅಹಿಂಸಾತ್ಮಕ ಚಳವಳಿ ಆರಂಭಿಸಿದರೆ ಇನ್ನೂ ಹತ್ತಿಪ್ಪತ್ತು ವರ್ಷಗಳಲ್ಲಿ ಅದರ ಫಲ ದೊರೆಯುವಂಥ ಮಟ್ಟಕ್ಕೆ ಅದು ತಲುಪಿದೆ ಎಂದೂ ಅವರ ನೊಂದು ನುಡಿದ್ದಾರೆ.

### ಸರ್ಕಾರಿ ಕಛೇರಿಗಳಲ್ಲಿ

ಬಹುಪಾಲು ಸರ್ಕಾರಿ ಕಛೇರಿಗಳಲ್ಲಿ ಈಗ ಕೆಲಸಗಳೇ ಸರಿಯಾಗಿ ನಡೆಯುತ್ತಿಲ್ಲ. ಫೈಲುಗಳ ಗುಡ್ಡೆಗಳು ದಿನ ದಿನಕ್ಕೆ ಬೆಳೆಯುತ್ತಿವೆ. ಮೇಲಾಧಿಕಾರಿಗಳು ಸರಿಯಾಗಿ ಕೆಲಸ ಮಾಡಿದರೆ ಉಳಿದ ನೌಕರರು ತಾವೇ ಕೆಲಸ ಮಾಡುತ್ತಾರೆ. ಆದರೆ ಇಂದು ಕಛೇರಿಗಳಲ್ಲಿ ಇರುವ ಪರಿಸ್ಥಿತಿಯೇ ಬೇರೆ. ಅದನ್ನೆಲ್ಲ ನೆನೆದುಕೊಂಡು ಈ ದೇಶದ ಭವಿಷ್ಯ ಕುರಿತು ಯೋಚಿಸಿದರೆ ಖೇದವಾಗುತ್ತದೆ.

ಕೇವಲ ಯೋಜನೆ ರೂಪಿಸಿ, ಅವುಗಳ ಯೋಜನಾ ವೆಚ್ಚ ಪುನರ್ವಿಮರ್ಶಿಸುವ ಮಕ್ಕಳಾಟ ಹೆಚ್ಚಾಗಿ ನಡೆಯುತ್ತಿದೆ. ಇಂತಾಗಿ ಯೋಜನೆಗಳು ತೀವ್ರ ಕಾರ್ಯರೂಪಕ್ಕೆ ಬಾರದಂತಾಗುತ್ತಿವೆ. ಇದು



ಡಾ|| ಸಿದ್ಧಯ್ಯ ಪುರಾಣಿಕ

ಹೀಗೆಯೇ ಮುಂದುವರಿದರೆ ದೇಶಕ್ಕೆ ಭವಿಷ್ಯ ಖಂಡಿತಾ ಇಲ್ಲವೆನ್ನುವಂತಾಗುತ್ತದೆ -ಎಂದೂ ಅವರು ನುಡಿದಿದ್ದಾರೆ.

### ಜನತೆಗೆ ಕರೆ

ಯಾರ ಮಾತನ್ನು ಎಷ್ಟರಮಟ್ಟಿಗೆ ನಂಬಬೇಕು, ಯಾರನ್ನು ಯಾವ ಸ್ಥಾನದಲ್ಲಿ ಇರಿಸಬೇಕು ಎಂಬುದನ್ನು ಜನತೆ ತೀವ್ರವಾಗಿ ಯೋಚಿಸುವಂಥ ಸನ್ನಿವೇಶವೀಗ ಉಂಟಾಗಿದೆ ಎಂದೂ ನುಡಿದ ಡಾ|| ಸಿದ್ದಯ್ಯನವರು, ದೇಶದಲ್ಲಿ ಜನರು ಕ್ರಾಂತಿ ನಡೆಸದಂತೆ ಹಲವಾರು ದುಷ್ಟ ಶಕ್ತಿಗಳು ಸುವ್ಯವಸ್ಥಿತ ಜಾಲ ಹೆಣೆದಿವೆ ಇಂಥ ಸಂಚನ್ನು ವಿಫಲಗೊಳಿಸಲು ಜನತೆ ಜಾಗೃತಗೊಳ್ಳಬೇಕು. ಭ್ರಷ್ಟಾಚಾರಕ್ಕೆ ಅಸಹಕಾರ ತೋರುವ ಧೈರ್ಯ, ಅನ್ಯಾಯ ಪ್ರತಿಭಟ್ಟಿಸುವ ಪ್ರವೃತ್ತಿ ಜನರಲ್ಲಿ ಬೆಳೆದು ಬರಬೇಕು. ಇಂತಾಗದಿದ್ದರೆ ದೇಶ ಹಾಳಾಗುತ್ತದೆ. ಜನ ಜೀವನದ ನೆಮ್ಮದಿ ಕುಸಿದು ಬೀಳುತ್ತದೆ ಹಾಗು ನಮ್ಮ ಪೀಳಿಗೆಯ ಭವಿಷ್ಯ ಅಂಧಕಾರಮಯವಾಗುತ್ತದೆ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.